

ಕಳುಹಿಸಿದಳು ರುಕ್ಮಿಣಿ. ಅಣ್ಣ ಬಲರಾಮ ಹಾಗೂ ಯಾದವ ಸೇನೆಯೊಂದಿಗೆ ಕುಂಡಿನಾಪುರಕ್ಕೆ ಬಂದ ಕೃಷ್ಣ ಗಿರಿಜಾಲಯಕ್ಕೆ ಪೂಜೆ ನಿಮಿತ್ತ ಬಂದ ವಿದರ್ಭ ರಾಜಕುಮಾರಿಯನ್ನು ರುಕ್ಮಿಣಿಯನ್ನು ತನ್ನ ರಥದಲ್ಲಿ ಏರಿಸಿಕೊಂಡು ದ್ವಾರಕೆಯತ್ತ ಹೊರಟ. ವಿಷಯ ತಿಳಿದ ರುಕ್ಮಿ ಮದುಮಗನಾಗಿ ಬಂದಿದ್ದ ಈ ಶಿಶುಪಾಲ, ದಿಬ್ಬಣದವರಾಗಿ ಬಂದಿದ್ದ ಮಗಧ ದೇಶದ ಜರಾಸಂಧ ಮತ್ತಿತರ ರಾಜರೊಂದಿಗೆ ಕೃಷ್ಣನ ರಥ ತಡೆದ. ಬಲರಾಮನ ಗದಾಘಾತಕ್ಕೆ ಜರಾಸಂಧ ಮೂರ್ಛೆ ಹೋದ. ಯಾದವ ಸೈನ್ಯ ಕುಂಡಿನಾಪುರದ ಸೇನೆಯನ್ನು ಹಿಮ್ಮೆಟ್ಟಿಸಿತು. ಆಗ ಈ ಶಿಶುಪಾಲ ಕೃಷ್ಣನಿಗೆ ಎದುರಾದ.

'ಜಾರ, ಚೋರ, ಗೋಪಾಲಕ...' ಆರಂಭವಾಯಿತು ಆತನ ಬೈಯ್ಗಳ, ಕೃಷ್ಣ ನಿಂದನೆ. ಕೃಷ್ಣ ನಸುನಗುತ್ತಾ ಆತನ ಅಪರಾಧಗಳ ಲೆಕ್ಕಕ್ಕೆ ತೊಡಗಿದ. ರುಕ್ಮಿ ಈ ಘಟನೆಯನ್ನು 'ಅಪಹರಣ' ಎಂದು ಕರೆದ. ನಿಜಕ್ಕೂ ಇದು ಅಪಹರಣ ಅಲ್ಲವೇ ಅಲ್ಲ. ರುಕ್ಮಿಣಿ ಸ್ವಯಂ ಆರಿಸಿ ವರಿಸಲು ಮುಂದಾದದದು. ರುಕ್ಮಿಣಿ ಸ್ವಯಂವರ...'

'ಹೌದು' ಎನ್ನುವಂತೆ ತಲೆಯಾಡಿಸಿದ ಭೀಮಸೇನ.

ಕೃಷ್ಣನ ಮೇಲಿನ ದ್ವೇಷವನ್ನು ಬಿಡುವಂತೆ ಶಿಶುಪಾಲನ ತಂದೆ ತಾಯಿಗಳೂ, ಮಡದಿ ಮಕ್ಕಳೂ ಬಹು ಪರಿಯಲ್ಲಿ ಶಿಶುಪಾಲನಿಗೆ ಹೇಳಿದರು; ಬೇಡಿಕೊಂಡರು; ಗೋಗರೆದರು. ತನ್ನ ಮಡದಿಯಾಗ ಬೇಕಾಗಿದ್ದ ವಿದರ್ಭ ರಾಜಕುಮಾರಿ ರುಕ್ಮಿಣಿಯನ್ನು ಕಳ್ಳರ ತೆರ ಕದ್ದೊಯ್ದ ಆ ಕೃಷ್ಣ ಮೇಲಿನ ದ್ವೇಷ ಬಿಡುವವ ತಾನಲ್ಲ. ಅವನಿಗೊಂದು ಗತಿ ಕಾಣಿಸಿಯೇ ಕಾಣಿಸುತ್ತೇನೆ ತಾನು ಎಂದು ಹಟ ತೊಟ್ಟ ಈ ಶಿಶುಪಾಲ. ಮಗನ ಈ ಬಗೆಯ ವರ್ತನೆಗೆ ಬೇಸರಗೊಂಡ ಧಾಮಘೋಷ ಅರಮನೆ ತೊರೆದು, ಅರಣ್ಯಕ್ಕೆ ಹೋಗಿ ತಪಸ್ಸನ್ನು ಆಚರಿಸಲು ಆರಂಭಿಸಿದ.

ಭೀಷ್ಮಾಚಾರ್ಯರು ಹೇಳಿದರು.

'ಅಂದರೆ... ಈಗ ಕಾಲ ಕೂಡಿ ಬರುತ್ತಿದೆ. ಈ ನಮ್ಮ ಭಾವ ಕೃಷ್ಣ ಚೇದಿಯ ಈ ಶಿಶುಪಾಲನ ವಧೆ ಮಾಡಲಿದ್ದಾನೆ' ಎಂದ ಭೀಮಸೇನ ಒಮ್ಮೆ ಕೃಷ್ಣನತ್ತ, ಇನ್ನೊಮ್ಮೆ ಶಿಶುಪಾಲನತ್ತ ನೋಡಿ.

'ಎಲವೊ ಭೀಮಸೇನಾ... ಈ ಗೋಪಕುಮಾರ ಎನ್ನನು ಕೊಲುವನೆ? ನಾನು ಇವನ ಕೈಯ್ಯಲಿ ಅಳಿವವನೆ? ಶಿವ ಶಿವಾ.. ಈ ವಿಕಾರ ನನ್ನನು ಏನ ಮಾಡಬಲ್ಲನು? ಆ ಮುದಿಯ ಭೀಷ್ಮ ಹಾಗೂ ಹೊಟ್ಟೆಬಾಕ ನಿನ್ನ ಭಟನೋ ಈ ಗೋಪಾಲಕ? ಗೋವಳರ ಹಟ್ಟಿಯ ಭಟ್ಟನಿಂದ ನಾನು ಸಾಯುವುದೇ?' ಗಹಗಹಿಸಿ ನಕ್ಕ ಶಿಶುಪಾಲ ತನ್ನ ಕಾಲನ್ನೆತ್ತಿ ನೆಲಕ್ಕೆ ಅಪ್ಪಳಿಸಿದ.

'ಚಿಕ್ಕತ್ತೇ.. ಶ್ರುತಶ್ರವೇ.. ಆಯಿತು.. ನಿನಗೆ ನಾನು ಮಾತು ಕೊಟ್ಟಂತೆ ನಿನ್ನ ಮಗ ಈ ಶಿಶುಪಾಲ ಮಾಡಿದ ನೂರು ಅಪರಾಧಗಳನ್ನು ಮನ್ನಿಸಿದೆ. ನಿನಗೆ ಕೊಟ್ಟ ಮಾತನ್ನು ನಾನು ಉಳಿಸಿಕೊಂಡೆ. ಈಗ ಜಯ ವಿಜಯರಿಗೆ ಕೊಟ್ಟ ಮಾತನ್ನು ನಾನು ಉಳಿಸಿಕೊಳ್ಳಬೇಕಾಗಿದೆ' ಮನಸ್ಸಿನಲ್ಲಿಯೇ ಅಂದುಕೊಂಡ ನಾನು ಸುದರ್ಶನ ಚಕ್ರವನ್ನು ನೆನೆದೆ. ಕೈಯ ಕಿರು ಬೆರಳಿನ ತುದಿಯಲ್ಲಿ ಕಾಣಿಸಿಕೊಂಡ ಸುದರ್ಶನ ಚಕ್ರಕ್ಕೆ ಹೇಳಿದೆ:

'ಆ ಶಿಶುಪಾಲನ ಶಿರವನ್ನು ತರಿ... ಹೋಗು. ತರಿದ ಶಿರವನ್ನು ಅಡವಿಯಲ್ಲಿ ವಟ ವೃಕ್ಷದ ಬುಡದಲ್ಲಿ ತಪವನ್ನು ಆಚರಿಸುತ್ತಿರುವ ಇವನ ತಂದೆ ಧಾಮಘೋಷನ ತೊಡೆಯಲ್ಲಿರಿಸಿ ಬಾ...' ಗರಗರನೆ ತಿರುಗಿತು ಸುದರ್ಶನ ಚಕ್ರ. ಕ್ಷಣಮಾತ್ರದಲ್ಲಿ ಚೇದೀಯ ಅರಸ ಶಿಶುಪಾಲನ ರುಂಡ ಮುಂಡದಿಂದ ಬೇರಾಯಿತು. ಶಿಶುಪಾಲನ ರುಂಡವನ್ನು ಹೊತ್ತ ಸುದರ್ಶನ ಚಕ್ರ ನೇರವಾಗಿ ಅಡವಿಯತ್ತ ಧಾವಿಸಿತು. ಕಾನನದಲ್ಲಿ ವಟ ವೃಕ್ಷವೊಂದರ ಬುಡದಲ್ಲಿ ಕುಳಿತು ತಪಸ್ಸು ಮಾಡುತ್ತಿದ್ದ ಧಾಮಘೋಷನ ತೊಡೆಯ ಮೇಲೆ ಶಿಶುಪಾಲನ ರುಂಡವನ್ನು ಇಟ್ಟಿತು ಸುದರ್ಶನ ಚಕ್ರ. ಕಣ್ ತೆರೆದ ಧಾಮಘೋಷ ರಕ್ತ ಸುರಿಯುತ್ತಿರುವ ರುಂಡವನ್ನು ನೋಡಿ.

'ಓಹ್.. ಮಗನೇ... ಶಿಶುಪಾಲಾ!' ಚೀರಿದ ಧಾಮಘೋಷ.

ಧಾಮಘೋಷನ ಪ್ರಾಣಪಕ್ಷಿ ಹಾರಿತು. ಆತನ ದೇಹ ನೆಲಕ್ಕೆ ಒರಗಿತು. ಇತ್ತ ಧರ್ಮರಾಜ ಕೈಗೊಂಡಿದ್ದ ರಾಜಸೂಯ ಯಾಗದ ಅಂತಿಮ ಘಟ್ಟವಾದ ಅಗ್ರಪೂಜೆ ನನಗೆ ಸಲ್ಲಲ್ಪಟ್ಟಿತು. ರಾಜಸೂಯ ಅಧ್ವರ ಮತ್ತೆ ಯಾವುದೇ ವಿಘ್ನಕ್ಕೆ ಎಡೆಯಾಗದೆ ನೆರವೇರಿತು. ಇನ್ನು ಕಾರುಶದ ರಾಜ ದಂತವಕ್ತನ ಸಂಹಾರ ಉಳಿದಿದೆ... ಜಯ ವಿಜಯರಿಗೆ ನಾನು ಕೊಟ್ಟ ಮಾತು ಪೂರ್ಣಗೊಳ್ಳುವ ಸಮಯ ಸನ್ನಿಹಿತವಾಗಲಿದೆ... ಅದೂ ಶೀಘ್ರವಾಗಿ.. ಅತಿ ಶೀಘ್ರವಾಗಿ...

ಪ್ರತಿಕ್ರಿಯಿಸಿ: **feedback@sudha.co.in**